**Language Code : 07**

इस पुस्तिका में **20** मुद्रित पृष्ठ हैं।
This booklet contains **20** Printed pages.

# JSS-24-II

**प्रश्न-पत्र-II / PAPER-II**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

**मुख्य परीक्षा पुस्तिका संख्या / Main Test Booklet No.**

**मुख्य परीक्षा पुस्तिका कोड / Main Test Booklet Code**

**I**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **I**। यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the Answer Sheet.
5. The CODE for this Language Booklet is **I**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) / Roll Number : in figures ____________________
: शब्दों में / in words ____________________
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________________ निरीक्षक के हस्ताक्षर : ____________________
Candidate's Signature : Invigilator's Signature :
Facsimile Signature Stamp of
Centre Superintendent : ____________________

www.careerindia.com

Language Code : **07**

# JSS-24-II

**ಪ್ರಶ್ನೆ ಪತ್ರಿಕೆ–II**

**ಕನ್ನಡ ಭಾಷಾ ಪೂರಕ**

**ಭಾಗ IV ಮತ್ತು V**

ಪ್ರಶ್ನೆ ಪುಸ್ತಿಕೆ ಸಂಕೇತ

**I**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ**.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ I** ಆಗಿದೆ. ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ______________________

: (ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of
Centre Superintendent : ______________________

www.careerindia.com

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 91 - 120**) ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

www.careerindia.com

CAREERINDIA

# PART–IV

## LANGUAGE–I

## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 91 - 120**) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91–99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಕರ್ನಾಟಕ ಸಂಗೀತದ ಪ್ರವರ್ತಕರು ದಕ್ಷಿಣ ಭಾರತದ ನಾಲ್ಕೂ ಭಾಷೆಗಳಿಂದ ಬಂದವರು ಎನ್ನುವುದು ಐತಿಹಾಸಿಕ ವಾಸ್ತವ. ಈ ಕ್ಷೇತ್ರದಲ್ಲಿ ಹೊಸಹಾದಿಯನ್ನು ನಿರ್ಮಿಸಿದ ಪುರಂದರದಾಸರ ಕಾಲದಲ್ಲೇ ಇದು ನಿಚ್ಚಳವಾಗಿತ್ತು. ಪುರಂದರದಾಸರು ಮತ್ತು ಅವರ ನಂತರ ಬಂದ ವೆಂಕಟಮುಖಿ ಇಬ್ಬರೂ ಕನ್ನಡಿಗರು. 'ಕರ್ನಾಟಕ ಸಂಗೀತದ ಕೃತಿಗಳ ಜನಕ' ಎಂದೇ ಹೆಸರಾಗಿರುವ ಅಣ್ಣಮಾಚಾರ್ಯರು (1408–1503) ತೆಲುಗು ಸೀಮೆಗೆ ಸೇರಿದವರು. 15ನೇ ಶತಮಾನದಲ್ಲಿದ್ದ ಸಂಗೀತಗಾರರಾದ ಅರುಣಗಿರಿನಾಥರ್ ಅವರು ತಮಿಳಿನವರು. ಈ ಅರುಣಗಿರಿನಾಥರೇ ಕರ್ನಾಟಕ ಸಂಗೀತದಲ್ಲಿ 108 ತಾಳಗಳ ಅಚ್ಚುಕಟ್ಟಾದ ವ್ಯವಸ್ಥೆಯನ್ನು ರೂಪಿಸಿದವರು. 15 ರಿಂದ 17ನೇ ಶತಮಾನದಲ್ಲಿ ಅತ್ಯಂತ ಸೃಜನಶೀಲವಾಗಿದ್ದ ಕರ್ನಾಟಕ ಸಂಗೀತಕ್ಕೆ ಹೀಗೆ ಭದ್ರ ಅಡಿಪಾಯ ಹಾಕಿದ ನಂತರ, ಮೂವರು ಅತ್ಯಂತ ಪ್ರತಿಭಾಶಾಲಿಗಳು ಈ ಸಂಗೀತವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದರು. 'ಕರ್ನಾಟಕ ಸಂಗೀತದ ತ್ರಿಮೂರ್ತಿ'ಗಳೆಂದೇ ಹೆಸರಾಗಿರುವ ಈ ಮೂವರು ಯಾರೆಂದರೆ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶಾಮಾಶಾಸ್ತ್ರಿಗಳು. ಈ ಪೈಕಿ ಅತ್ಯಂತ ಪೂಜನೀಯ ಸ್ಥಾನಮಾನಗಳಿಗೆ ಪಾತ್ರರಾಗಿರುವ ತ್ಯಾಗರಾಜರು (1767–1847) ತೆಲುಗಿನವರಾದರೆ, ಮುತ್ತುಸ್ವಾಮಿ ದೀಕ್ಷಿತರು (1776–1835) ಮತ್ತು ಶಾಮಾಶಾಸ್ತ್ರಿಗಳು (1762–1827) ತಮಿಳು ಹಿನ್ನೆಲೆಯವರು ಆದರೆ ಈ 'ತ್ರಿಮೂರ್ತಿ'ಗಳ ವಿಷಯದಲ್ಲಿ ಅಸಾಧಾರಣವಾದ ಒಂದು ಕಾಕತಾಳೀಯ ಅಂಶವಿದೆ. ಅದೇನೆಂದರೆ, ಈ ಮೂವರೂ ಸಹ ತಂಜಾವೂರು ಜಿಲ್ಲೆಯಲ್ಲಿರುವ ಒಂದು ಸಣ್ಣ ಹಳ್ಳಿಯಾದ ತಿರುವಾರೂರಿನವರು! ಈ ತ್ರಿಮೂರ್ತಿಗಳಿಂದಾಗಿ ಆ ಪುಟ್ಟ ಹಳ್ಳಿ ಕರ್ನಾಟಕ ಸಂಗೀತದ ಪವಿತ್ರಭೂಮಿಯಾಯಿತು.

ಕರ್ನಾಟಕ ಸಂಗೀತಕ್ಕೆ ಮಲಯಾಳಂನ ಕೊಡುಗೆ ಏನೆಂದರೆ, 'ಸೋಪಾನ ಸಂಗೀತ'ವೆಂಬ ಒಂದು ಧಾರೆ. ದೇವಸ್ಥಾನಗಳ ಮೆಟ್ಟಿಲುಗಳ ಮೇಲೆ ಇದನ್ನು ಹಾಡುತ್ತಿದ್ದುದೇ ಇದಕ್ಕೆ ಈ ಹೆಸರು ಬರಲು ಕಾರಣ. 18ನೇ ಶತಮಾನದ ಹೊತ್ತಿಗಾಗಲೇ ಸೋಪಾನ ಸಂಗೀತ ಮತ್ತು ಕಥಕ್ಕಳಿ ನೃತ್ಯ ಪ್ರಕಾರಗಳೆರಡೂ ಕರ್ನಾಟಕ ಸಂಗೀತದ ರಾಗಗಳನ್ನು ಸ್ವೀಕರಿಸುತ್ತಿದ್ದವು. ಆದರೆ, ಸಂಗೀತಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟ ತಿರುವಾಂಕೂರಿನ ಮಹಾರಾಜರಾದ ಸ್ವಾತಿ ತಿರುನಾಳ್ (1813–47) ಅವರ ಆಗಮನದೊಂದಿಗೆ ಕರ್ನಾಟಕ ಸಂಗೀತಕ್ಕೆ ಮಲಯಾಳಂನ ನೇರ ಕೊಡುಗೆ ಶುರುವಾಯಿತು. ಒಳ್ಳೆಯ ಕವಿ, ಹಾಡುಗಾರ ಮತ್ತು ಕೃತಿ ರಚನೆಕಾರರಾಗಿದ್ದ ಸ್ವಾತಿ ತಿರುನಾಳರು ಸಂಸ್ಕೃತ, ಮಲಯಾಳಂ ಮತ್ತು ತೆಲುಗಿನಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರು ತಮ್ಮ ಕೆಲವು ಕೃತಿಗಳನ್ನು ಹಿಂದೂಸ್ತಾನಿ ರಾಗಗಳಲ್ಲೂ ಸಂಯೋಜಿಸಿದ್ದಾರೆ. ತ್ಯಾಗರಾಜರು, ದೀಕ್ಷಿತರು ಮತ್ತು ಶಾಸ್ತ್ರಿಗಳು ಉತ್ತುಂಗದಲ್ಲಿದ್ದ ಕಾಲದಲ್ಲೇ ದಕ್ಷಿಣ ಭಾರತವು ಬ್ರಿಟೀಷರು ಸಾರಿದ ಯುದ್ಧಗಳಿಂದಾಗಿ ಕುಸಿದು ಹೋಯಿತು. ಆಗ ಮಲಯಾಳಂ ಸೀಮೆಯ ತಿರುವಾಂಕೂರು ಕರ್ನಾಟಕ ಸಂಗೀತದ ಶ್ರೇಯೋಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿತು. ಒಂದು ನಂಬಲರ್ಹ ಮೂಲ ಹೇಳುವಂತೆ 'ಇಡೀ ದಕ್ಷಿಣ ಭಾರತದಲ್ಲಿ ಯುದ್ಧಗಳಿಂದ ನಲುಗದೆ, ಸುರಕ್ಷಿತವಾಗಿದ್ದ ಒಂದೇ ಒಂದು ಸಂಸ್ಥಾನವೆಂದರೆ ಅದು ತಿರುವಾಂಕೂರು ಮಾತ್ರ. ಇದರ ಪರಿಣಾಮವಾಗಿ ಸಂಗೀತ ಅಲ್ಲಿ ಅರಳಿತು ಯುದ್ಧಗಳಿಂದ ಜರ್ಜರಿತವಾಗಿ ಮೈಸೂರು ಮತ್ತು ತಂಜಾವೂರು ಸಂಸ್ಥಾನಗಳು ಕುಸಿದು ಹೋಗಿದ್ದರಿಂದ ಇಲ್ಲಿದ್ದ ಸಂಗೀತಗಾರರೆಲ್ಲ ನೆಮ್ಮದಿಯ ಜೀವನ ಅರಸಿಕೊಂಡು ದಕ್ಷಿಣ ಭಾರತದ ತುತ್ತತುದಿಯಲ್ಲಿದ್ದ ತಿರುವಾಂಕೂರಿಗೆ ವಲಸೆ ಹೋದರು.'

**91.** ತಿರುವಾಂಕೂರು ಯಾವ ರಾಜ್ಯದಲ್ಲಿದೆ ?

(1) ತಮಿಳುನಾಡು (2) ಕೇರಳ (3) ಕರ್ನಾಟಕ (4) ಆಂಧ್ರಪ್ರದೇಶ

www.careerindia.com

92. 'ವಿಷಯದಲ್ಲಿ' – ಎಂಬ ಪದದಲ್ಲಿರುವ ಪ್ರತ್ಯಯ :

(1) ಪ್ರಥಮ ವಿಭಕ್ತಿ (2) ಪಂಚಮಿ ವಿಭಕ್ತಿ (3) ತೃತೀಯ ವಿಭಕ್ತಿ (4) ಸಪ್ತಮಿ ವಿಭಕ್ತಿ

93. ಕರ್ನಾಟಕ ಸಂಗೀತದಲ್ಲಿ 108 ತಾಳಗಳ ಅಚ್ಚುಕಟ್ಟಾದ ವ್ಯವಸ್ಥೆಯನ್ನು ರೂಪಿಸಿದವರು ಯಾರು ?

(1) ಶ್ಯಾಮಾಶಾಸ್ತ್ರಿಗಳು (2) ಮುತ್ತುಸ್ವಾಮಿ ದೀಕ್ಷಿತರು

(3) ಅರುಣಗಿರಿನಾಥರು (4) ಸ್ವಾತಿ ತಿರುನಾಳರು

94. ಸಂಗೀತಗಾರರೆಲ್ಲಾ ತಿರುವಾಂಕೂರಿಗೆ ವಲಸೆ ಹೋಗಲು ಕಾರಣವೇನು ?

(1) ರಾಜಾಶ್ರಯ ಅರಸಿ

(2) ಉದ್ಯೋಗಾಕಾಂಕ್ಷಿಗಳಾಗಿ

(3) ಮೈಸೂರು ಮತ್ತು ತಂಜಾವೂರು ಸಂಸ್ಥಾನಗಳು ಯುದ್ಧಗಳಿಂದ ಕುಸಿದದ್ದು

(4) ಸಂಗೀತ ಕಚೇರಿಗಳನ್ನು ನಡೆಸುವುದಕ್ಕಾಗಿ

95. ಕರ್ನಾಟಕ ಸಂಗೀತ ಕೃತಿಗಳ ಜನಕ ಎಂದು ಯಾರು ಹೆಸರಾಗಿದ್ದಾರೆ ?

(1) ಪುರಂದರದಾಸರು (2) ಅಣ್ಣಮಾಚಾರ್ಯರು

(3) ತ್ಯಾಗರಾಜರು (4) ಮುತ್ತುಸ್ವಾಮಿ ದೀಕ್ಷಿತರು

96. ಕಾಕತಾಳೀಯ ಎಂದರೆ :

(1) ಆಕಸ್ಮಿಕ (2) ಕಾಗೆ ಕತೆ (3) ಅನ್ಯದೇಶ್ಯ (4) ನಿರೀಕ್ಷಿತ

97. ಸೋಪಾನ ಪದದ ಅರ್ಥವೇನು ?

(1) ಸೊಪ್ಪು (2) ಬಾವಿ (3) ಮೆಟ್ಟಿಲು (4) ಸಂಗೀತ

98. ಕಛೇರಿ ಪದದ ಮೂಲ :

(1) ಹಿಂದೂಸ್ತಾನಿ (2) ಇಂಗ್ಲಿಷ್ (3) ಮರಾಠಿ (4) ಕನ್ನಡ

99. ಸೋಪಾನ ಸಂಗೀತವೆಂದರೆ :

(1) ದೇವಾಲಯದ ಮೆಟ್ಟಿಲುಗಳ ಮೇಲೆ ಹಾಡುವ ಸಂಗೀತ

(2) ಸಭಾ ಸಂಗೀತ

(3) ಸೋಬಾನೆ ಹಾಡು

(4) ಜಾನಪದ ವೀರಕಾವ್ಯ

CAREERINDIA

**ನಿರ್ದೇಶನ : ಈ ಕೆಳಗಿನ ಪದ್ಯ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100–105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಸುಖವು ಬೀದಿಯ ನೆರಳ। ದುಃಖವು ದೂಡುವ ಬಿಸಿಲ
ಸುಖ–ದುಃಖ ನಮಗ ಸರಿಸವನ। ತಂಗೆಮ್ಮಾ ಒಂದುಬಿಟ್ಟೊಂದು ದೊರಿಯಾವ
ಸುಖಕ ಮರುಳಾದೀವ। ದುಃಖಕ ಬ್ಯಾಸತ್ತೀವ
ಸುಖ ಬೇಡಿ ಮನವು ಮಲಮಲ। ತಂಗೆಮ್ಮಾ
ದುಃಖ ನೋಡಿ ಜೀವ ಗಲಬಲ
ಸುಖವಂತ ಹಿಡಿದೀವ। ದುಃಖವಾಗಿ ಪಡೆದೀವ
ಹೂವಲ್ಲ ಜಾಣಿ ಹುಳ ನೋಡ। ತಂಗೆಮ್ಮಾ
ಬೆಳದಿಂಗಳಲ್ಲ ಉರಿಬಿಸಿಲ
ಮುತ್ತಂತ ಮುಟ್ಟವ। ಕಿಡಿಯಾಗಿ ಕಚ್ಚಾವ
ಹಣ್ಣಲ್ಲ ಜಾಣಿ ಹಿಡಿಗೆಂಡ। ತಂಗೆಮ್ಮಾ
ಬಳ್ಳೆಲ್ಲ ಬಿಗಿದ ಬಲಿ ನೋಡ

**100.** ಈ ಕವನದಲ್ಲಿ ಸುಖ–ದುಃಖ ವರ್ಣನೆಯ ಶೈಲಿ ಯಾವುದು ?
(1) ಸಂಕೇತ (2) ರೂಪಕಾತ್ಮಕ (3) ಉಪಮಾನ (4) ಸಾದೃಶ

**101.** **'ಗಲಬಲ'** ಈ ಪದದ ಅರ್ಥ :
(1) ಭಯ (2) ಆತಂಕ (3) ಅವಸರ (4) ಗೊಂದಲ

**102.** ಹಣ್ಣಲ್ಲ ಜಾಣಿ ಹಿಡಿಗೆಂಡ – ಈ ವಾಕ್ಯಾಂಶದ ಭಾವವೇನು ?
(1) ಸುಖವೆನ್ನುವುದು ವಾಸ್ತವವಾಗಿ ಅಪಾಯಕಾರಿ ದುಃಖವೇ
(2) ಹಣ್ಣು ಎನ್ನುವುದು ಕೆಂಪಾಗಿರುತ್ತದೆ
(3) ಇದು ಹಣ್ಣಲ್ಲ; ಬೆಂಕಿ
(4) ಜಾಣರಾದವರಿಗೆ ಹಣ್ಣು ಬೆಂಕಿಯ ಹಾಗೆ ಕಾಣುತ್ತದೆ

**103.** **'ಸುಖಕ'** – ಈ ಪದದಲ್ಲಿರುವ ವಿಭಕ್ತಿ :
(1) ಪ್ರಥಮಾ (2) ವಿಭಕ್ತಿ ಪ್ರತ್ಯಯ ಇಲ್ಲ
(3) ಚತುರ್ಥಿ (4) ದ್ವಿತೀಯಾ

**104.** ತತ್ವವನ್ನು ಯಾರನ್ನು ಉದ್ದೇಶಿಸಿ ಹೇಳಲಾಗಿದೆ ?
(1) ತಂಗಿಯ ವಯಸ್ಸಿನ ಹೆಣ್ಣನ್ನು (2) ವಯಸ್ಸಿಗೆ ಬಂದ ತಂಗಿಯನ್ನು
(3) ಬದುಕನ್ನು ಸುಖವೆಂದು ತಿಳಿದ ಹೆಣ್ಣನ್ನು (4) ತನ್ನ ತಂಗಿಯನ್ನು

www.careerindia.com

105. 'ಪಡೆದೀವ' – ಈ ಕ್ರಿಯಾಪದವನ್ನು ಪ್ರಮಾಣ ಭಾಷೆಯಲ್ಲಿ ಪರಿವರ್ತಿಸಿ.

(1) ಪಡೆದಿದ್ದೀವಿ
(2) ಪಡೆದಾಗ
(3) ಪಡೆದು ಇದ್ದೀವಿ
(4) ಇವುಗಳನ್ನು ಪಡೆದ್ದಿದ್ದೀವಿ

106. ಶಿಕ್ಷಕರು, ಕಲಿಯುವವರು ಮತ್ತು ಸಾಮಗ್ರಿಗಳನ್ನು ಕುರಿತಂತಹ ಪರೀಕ್ಷೆಗಳು ಮತ್ತು ಮೌಲ್ಯಮಾಪನಗಳ ಪರಿಣಾಮಗಳನ್ನು ಏನೆಂದು ಕರೆಯುತ್ತಾರೆ ?

(1) ಸಂಚಿತ ಪರಿಣಾಮ (Corpus effect)
(2) ತಿಳಿಯಾಗಿಸುವ ಪರಿಣಾಮ (Washback effect)
(3) ಪಾಠದ ಕೊಠಡಿ ಪರಿಣಾಮ
(4) ಬಲಪಡಿಸುವುದು (Reinforcement)

107. ಶಾಲೆಗಳು ದ್ವಿಭಾಷೆಗಳನ್ನು ಸೇರಿಸಲು ಕ್ರಮವಹಿಸಬೇಕು. ಏಕೆಂದರೆ ಅದು :

(1) ಮಗುವಿನ ಸಂಸ್ಕೃತಿ ಮತ್ತು ಭಾಷೆಯ ಮೌಲ್ಯವನ್ನು ಹೆಚ್ಚಿಸುತ್ತದೆ.
(2) ಇಂಗ್ಲಿಷ್ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಕಲಿಸಲು ಮಹತ್ವ ನೀಡುತ್ತದೆ.
(3) ಮಗುವಿನ ಭಾಷೆಯನ್ನು ಉತ್ತೇಜಿಸುತ್ತದೆ. ಆದರೆ ಸಂಸ್ಕೃತಿಯನ್ನಲ್ಲ.
(4) ಪ್ರಥಮ ಭಾಷೆಯ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತದೆ.

108. ರಾಗವಾಗಿ ಹಾಡುವುದು, ಸ್ವರ, ಸ್ವರವನ್ನು ಒತ್ತಿ ಉಚ್ಚರಿಸುವುದು, ಲಯಬದ್ಧತೆ ಮುಂತಾದವುಗಳನ್ನು ಒಳಗೊಂಡ ಭಾಷಾ ಕ್ರಿಯೆಯನ್ನು ಏನೆಂದು ಕರೆಯುತ್ತಾರೆ ?

(1) ಪದ್ಯ
(2) ಛಂದಶ್ಶಾಸ್ತ್ರ
(3) ಧ್ವನಿ ವಿಜ್ಞಾನ
(4) ವ್ಯಾವಹಾರಿಕತೆ

109. ಭಾರತದಲ್ಲಿನ ಭಾಷೆಗಳ ವಿಷಯದಲ್ಲಿ ಈ ಕೆಳಕಂಡ ಯಾವ ಹೇಳಿಕೆ ಸರಿಯಲ್ಲ ?

(1) ಭಾರತದ ಸಂವಿಧಾನದ ಪ್ರಕಾರ, ಇಂಗ್ಲಿಷ್ ಸಹಾಯಕ ಅಧಿಕೃತ ಭಾಷೆಯಾಗಿದೆ.
(2) ಭಾರತ ಸಂವಿಧಾನದ 8ನೇ ಅನುಸೂಚಿಯ ಪ್ರಕಾರ, ಒಟ್ಟು 22 ಭಾಷೆಗಳನ್ನು ಪಟ್ಟಿಮಾಡಲಾಗಿದೆ.
(3) ಸಂಸ್ಕೃತ ಆಧುನಿಕ ಭಾರತದ ಭಾಷೆಯಾಗಿದೆ.
(4) ಭಾರತ ಉಪಖಂಡದಲ್ಲಿ ಹಿಂದಿ ಸರ್ವಮಾನ್ಯ ಭಾಷೆಯಾಗಿದೆ.

110. ಭಾಷಾ ತರಗತಿಯಲ್ಲಿ, ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳನ್ನು ಗುಂಪುಗಳನ್ನು ಮಾಡಿಕೊಂಡು, ನೀಡಲಾದ ಒಂದು ವಿಷಯದ ಮೇಲೆ ಜಾಹೀರಾತನ್ನು ಪ್ರಸ್ತುತಪಡಿಸಿದರು,

ಈ ವಿಧಾನದಲ್ಲಿ ಭಾಷೆಯನ್ನು ಕಲಿಯುವ ವಿಧಾನವೆಂದರೆ,

(1) ಜೊತೆಗೂಡಿ ಕಲಿಯುವುದು
(2) ಸ್ಪರ್ಧೆ ಮತ್ತು ಪ್ರತಿಸ್ಪರ್ಧೆ
(3) ಭಾಷಾ ಕ್ರೀಡೆಗಳು
(4) ಮಾರ್ಗದರ್ಶನ ಮತ್ತು ಸಮಾಲೋಚನೆ

www.careerindia.com

**111.** ಶಿಕ್ಷಕರು ರೆಸ್ಟೋರೆಂಟ್‌ನಲ್ಲಿ ಬಳಸುವ ಪದಸಮೂಹವನ್ನು ಕಲಿಯುವವರಿಗೆ ಪರಿಚಯ ಮಾಡಿಕೊಳ್ಳುವ ಕೆಲಸವನ್ನು ನೀಡುತ್ತಾಳೆ. ಈ ಕೆಳಕಂಡ ಅಂಶಗಳಲ್ಲಿ ಯಾವುದು ಪಾಠದ ಉದ್ದೇಶವಾಗಿರಬೇಕು ?

(1) ನಿಘಂಟಿನ ಪದಗಳನ್ನು ಕಲಿಯುವವರಿಗೆ ಪರಿಚಯ ಮಾಡಿಕೊಡುವುದು.

(2) ವ್ಯಾಕರಣದ ವಿಷಯವನ್ನು ಚೆನ್ನಾಗಿ ಪರಿಚಯ ಮಾಡಿಸುವುದು.

(3) ರಜಾದಿನಗಳಲ್ಲಿ ಹೋಗುವ ಸ್ಥಳದ ಬಗ್ಗೆ (destination) ಪಠ್ಯವನ್ನು ಸೇರಿಸುವುದು.

(4) ವಿಮರ್ಶಾತ್ಮಕ ಚಿಂತನೆಯನ್ನು ಮೂಡಿಸುವುದು.

**112.** ಭಾಷೆಯು ಅದು ಶಾಬ್ದಿಕವಾಗಿರಲಿ ಅಥವಾ ಅಶಾಬ್ದಿಕವಾಗಿರಲಿ, ಹವ್ಯಾಸವಾಗಿಸುವ ಪ್ರಕ್ರಿಯೆಯ ಮೂಲಕ ಸಂಭವಿಸುತ್ತದೆ ಎಂಬುದನ್ನು ಕಲಿಕೆಯ ಯಾವ ಸಿದ್ಧಾಂತ ನಂಬುತ್ತದೆ ?

(1) ಪ್ರಯೋಜನಾರ್ಥಕವಾದ (Functionalist)

(2) ವರ್ತನಾವಾದ (Behaviourist)

(3) ಜ್ಞಾನಗ್ರಹಣವಾದ (Cognitivist)

(4) ಸಂವಹನವಾದ (Interactionalist)

**113.** ಕತೆಯ ಕಾಲ ಮತ್ತು ಸ್ಥಳವನ್ನು ಹೀಗೆಂದು ಕರೆಯುತ್ತಾರೆ :

(1) ವಿಷಯ (Theme)

(2) ಸನ್ನಿವೇಶ (Setting)

(3) ವಸ್ತು (Plot)

(4) ಮುಕ್ತಾಯ (Climax)

**114.** ಭಾಷಾ ತರಗತಿಯಲ್ಲಿ ಶಿಕ್ಷಕರು ಒಂದು ಗುಂಪಿಗೆ ಖರೀದಿದಾರರು, ಆಸ್ತಿ ಮಾರಾಟಗಾರರು, ಭೂಮಾಲೀಕರು ಮತ್ತು ಗೇಣಿದಾರರಾಗಿ ನಟಿಸಲು ಹೇಳಿದರು ಮತ್ತು ಇತರ ವಿದ್ಯಾರ್ಥಿಗಳಿಗೆ ಈ ನಟನೆಯನ್ನು ನೋಡಿ ಅವರ ಸಂಭಾಷಣೆಯನ್ನು ಆನಂದಿಸುವಂತೆ ಹೇಳಿದರು. ಈ ಚಟುವಟಿಕೆಯನ್ನು ಏನೆಂದು ಕರೆಯುತ್ತಾರೆ ?

(1) ಪಾತ್ರ ನಿರ್ವಹಣೆ

(2) ನಾಟಕ

(3) ನಟನಾ ಶಾಲೆ

(4) ಮಾರ್ಗದರ್ಶನ

**115.** ಭಾಷಾ ಶಿಕ್ಷಕಿಯು Vನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಸಲು ವೃತ್ತಪತ್ರಿಕೆಗಳು, ಖಾದ್ಯಗಳ ಪಟ್ಟಿ (Menu) ಮತ್ತು ರೈಲು ಟಿಕೇಟುಗಳಂತಹ ಪ್ರತಿದಿನದ ಬಳಕೆಯ ವಸ್ತುಗಳನ್ನು ತರುತ್ತಾಳೆ. ಕಲಿಸುವುದಕ್ಕೆ ಅವಳು ಏನು ಮಾಡುತ್ತಿದ್ದಾಳೆ ?

(1) ಕಲಿಕೆಯು ತುಂಬಾ ವಾಸ್ತವಿಕವಾಗಿ ಮತ್ತು ಉಪಯುಕ್ತವಾಗಿ ಇರುವಂತೆ ಮಾಡಲು ಅವಳು ಆಧಾರಪೂರ್ವಕ ಸಾಮಗ್ರಿಗಳನ್ನು ಬಳಸುತ್ತಿದ್ದಾಳೆ.

(2) ವಿದ್ಯಾರ್ಥಿಗಳು ಹಲವಾರು ಭಾಷೆಗಳನ್ನು ಕಲಿಯಲು ಸಾಧ್ಯವಾಗುವಂತೆ ಅವಳು ನೆರವು ನೀಡುತ್ತಿದ್ದಾಳೆ.

(3) ವಾಸ್ತವಿಕ ಜೀವನದಲ್ಲಿ ಸಂಭವಿಸುವಂತಹ ಸನ್ನಿವೇಶಗಳ ಮುಖಾಂತರ ವಿದ್ಯಾರ್ಥಿಗಳಿಗೆ ಇಂಗ್ಲಿಷನ್ನು ಕಲಿಸುವುದಕ್ಕೆ ಬಯಸಿದ್ದಾಳೆ.

(4) ಅವಳು ಮಕ್ಕಳಲ್ಲಿ ಅರಿವನ್ನು ಮೂಡಿಸುತ್ತಿದ್ದಾಳೆ.

**116.** ಪಾಠವನ್ನು ಆಲಿಸಲು ಯೋಜಿಸುವಾಗ ಈ ಕೆಳಕಂಡ ಯಾವ ಅಂಶ ಮುಖ್ಯವಲ್ಲ ?

(1) ಧ್ವನಿ ಮುದ್ರಣವನ್ನು ಆಗಾಗ ನಿಲ್ಲಿಸುವುದು

(2) ಪಾಠ ಮಾಡುವ ವೇಗ

(3) ಮಾತನಾಡುವವರ ಲಿಂಗ (gender)

(4) ಮಾತಾನಾಡುವವರ ಸಂಖ್ಯೆ

**117.** ಭಾರತದಲ್ಲಿ ಪ್ರಚಲಿತದಲ್ಲಿರುವ ಬಹುಭಾಷಿಕತೆಯು ಈ ಕೆಳಕಂಡ ಅಂಶಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಶಿಕ್ಷಕರನ್ನು ತೊಡಗಿಸುತ್ತದೆ :

(1) ಸಂವಹನವು ಸಂಭವಿಸುತ್ತದೆ ಮತ್ತು ಸಾಮಾಜಿಕ ಸಾಮರಸ್ಯವನ್ನು ನಿರ್ವಹಿಸಲಾಗುತ್ತದೆ.

(2) ಅಲ್ಪಸಂಖ್ಯಾತ ಭಾಷೆಯನ್ನು ಪ್ರಧಾನ ಭಾಷೆಗಳೊಂದಿಗೆ ಸೇರಿಸಬೇಕು.

(3) ವೈವಿಧ್ಯಮಯ ಸಮಾಜದಲ್ಲಿ 'ಒಂದು ಭಾಷಾ' ನೀತಿಯನ್ನು ರೂಪಿಸಬೇಕು.

(4) ಭಾಷೆ, ಗುರುತಿಸುವಿಕೆ ಮತ್ತು ಸಂಸ್ಕೃತಿಗಳು ಪ್ರತ್ಯೇಕ ಘಟಕಗಳು.

**118.** ಭಾಷೆಯ ಯಾವ ಕೌಶಲ್ಯವನ್ನು ಕ್ಷಿಪ್ರಗ್ರಾಹಿ (receptive) ಕೌಶಲ್ಯಗಳು ಎಂದು ಕರೆಯುತ್ತಾರೆ ?

(1) ಆಲಿಸುವುದು ಮತ್ತು ಮಾತನಾಡುವುದು

(2) ಮಾತನಾಡುವುದು ಮತ್ತು ಬರೆಯುವುದು

(3) ಓದುವುದು ಮತ್ತು ಬರೆಯುವುದು

(4) ಆಲಿಸುವುದು ಮತ್ತು ಬರೆಯುವುದು

**119.** ಆಲಿಸುವುದು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ :

(1) ಶಬ್ದವನ್ನು ಕೇಳುವುದು, ಶಬ್ದಗಳು ಇರುವ ಹಾಗೆಯೇ ಅವುಗಳನ್ನು ಬಳಕೆ ಭಾಷೆಗೆ ತಿರುಗಿಸುವುದು (decode)

(2) ವಿಷಯವನ್ನು ಊಹಿಸುವುದು

(3) ವಿಷಯದ ಬಗೆಗಿರುವ ಪೂರ್ವಜ್ಞಾನವನ್ನು ಬಳಸಿಕೊಳ್ಳುವುದು

(4) ಶಬ್ದಗಳನ್ನು ಗುರುತಿಸುವುದು ಮತ್ತು ಅವುಗಳಿಂದ ಅರ್ಥವನ್ನು ತರ್ಕಿಸುವುದು

**120.** ಎ ಅಂಕಣದಲ್ಲಿರುವ ಭಾಷಾ ಕಲಿಕಾ ವಿಧಾನಗಳನ್ನು ಬಿ ಅಂಕಣದಲ್ಲಿರುವ ಅದರ ಅರ್ಥಗ್ರಹಿಕೆಗೆ ಅಥವಾ ಸಂಬಂಧಪಟ್ಟ ಚಟುವಟಿಕೆಯೊಂದಿಗೆ ಹೋಲಿಸಿ.

| ಎ | | ಬಿ | |
|---|---|---|---|
| (a) | ಸಂವಹನಾತ್ಮಕ ಭಾಷಾ ಬೋಧನೆ | (i) | ಸಾಮಾಜಿಕವಾಗಿ ಅಂಗೀಕಾರಾರ್ಹವಾದ ಮತ್ತು ಸಂದರ್ಭಕ್ಕೆ ಸೂಕ್ತವಾದ ಭಾಷೆ |
| (b) | ನೇರ ವಿಧಾನ | (ii) | ಮೌನವಾಗಿ ಓದುವುದು |
| (c) | ವ್ಯಾಕರಣ ಭಾಷಾಂತರ | (iii) | ಸಾಹಿತ್ಯ (literary) ಪಠ್ಯಗಳನ್ನು ಬರೆಯುವುದು |
| (d) | ವೆಸ್ಟರ್ನ್ ಹೊಸ ವಿಧಾನ | (iv) | ಅನುಗಮನಿತ (inductive) ವಿಧಾನದ ಮೂಲಕ ವ್ಯಾಕರಣ ಕಲಿಸುವುದು |

(1) (a)-(i), (b)-(iv), (c)-(iii), (d)-(ii)

(2) (a)-(iv), (b)-(ii), (c)-(iii), (d)-(i)

(3) (a)-(iii), (b)-(i), (c)-(ii), (d)-(iv)

(4) (a)-(ii), (b)-(i), (c)-(iv), (d)-(iii)

CAREERINDIA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

www.careerindia.com

## PART–V

## LANGUAGE–II

## KANNADA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 121-150)** ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121 - 128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಕುಂದಲತಳಿಗೆ ಶೈಶವದಿಂದಾರಂಭಿಸಿ ಆಯಾ ವಯಸ್ಸಿಗೆ ಅನುಗುಣವಾದ ಆಟವು ಇತ್ತು. ಜೊತೆಗಾರ ಯೋಗೀಶ್ವರನೇ, ಆತ ಅವಳ ಇಷ್ಟ ಇದುವೇ ಎಂದು ತಿಳಿದುಕೊಂಡು ತಕ್ಷಣ ಅವನ್ನು ಸಾಧಿಸಿಕೊಡುವನು. ಬಾಲ್ಯಕಾಲದಲ್ಲಿ ಏನಾದರೂ ಹಿತವಾಗದೆ ಅತ್ತರೆ ಅದಕ್ಕೆ ಕಾರಣವೇನೆಂದು ಅರಿತು ಹಿತವಾದುದನ್ನು ಮಾಡಿಕೊಡುತ್ತಿದ್ದ. ಯಾಕೆ ಹೆಚ್ಚು ಹೇಳಬೇಕು ಆತ ಅವಳ ಹುಡುಗಾಟಿಕೆಗಳೆಲ್ಲಕ್ಕೂ ತಲೆಯಾಡಿಸಿ ನಿಲ್ಲುವುದು ಕೆಲವೊಮ್ಮೆ ತಾನೇ ಬಾಲ ಚಾಪಲ್ಯವನ್ನು ಅಭಿನಯಿಸಿ ಅವಳ ಜೊತೆ ಆಟವಾಡುವುದೂ ಇತ್ತು. ಅಪಾಯಕರವಾದ ಆಟಗಳಿಂದ ದೂರವಿಡುತ್ತಿದ್ದ. ವ್ಯಾಯಾಮದಿಂದ ದೇಹಕ್ಕೆ ಲಾಘವವನ್ನೂ ಅಂಗಪುಷ್ಟಿಯನ್ನೂ ಉಂಟುಮಾಡುವ ಆಟಗಳಲ್ಲಿ ಇಷ್ಟವಾಗುವಂತೆ ಮಾಡುತ್ತಿದ್ದ, ಹೀಗೆ ಅವಳಲ್ಲಿ ತಂದೆಯ ಪ್ರೀತಿಯನ್ನು ಆಟದಲ್ಲಿ ಗೆಳೆಯರ ಒಡನಾಟವನ್ನು ಕೆಲವೊಂದು ಸಮಯಗಳಲ್ಲಿ ಉಪದೇಶಕನ ಗಾಂಭೀರ್ಯವನ್ನು ಯಾವಾಗಲೂ ತಾಯಿಯಂತೆ ಲಾಲನೆಯಲ್ಲಿ ಒಮ್ಮೆಯೂ ಅಪ್ರಿಯವಾಗದಂತೆ ಬೆಳೆಸಿಕೊಂಡು ಬರಲು ಯೋಗೀಶ್ವರನು ಪಟ್ಟಪಾಡಿನಿಂದ ಕುಂದಲತಳನ್ನು ತನ್ನ ಅಪರಿಮಿತವಾಗಿರುವ ಗುಣೋತ್ಕರ್ಷಗಳಿಂದ ಅತ್ಯಂತ ಸಫಲವಾಗುವಂತೆ ಮಾಡಿದ್ದ. ಹೀಗಿತ್ತು ಕುಂದಲತಳ ಅವಸ್ಥೆ.

ಮತ್ತೆ ಪಾರ್ವತಿ ಎಂಬ ಹೆಸರಿನ ಮಹಿಳೆ ಇದ್ದಾಳೆ, ಆ ಮಹಿಳೆಗೆ ಐವತ್ತಕ್ಕೂ ಹೆಚ್ಚು ಪ್ರಾಯವಾಗಿದೆಯಾದರೂ ಹೇಳತಕ್ಕ ಯಾವುದೇ ವಾರ್ಧಕ್ಯದ ಲಕ್ಷಣಗಳು ಆರಂಭವಾಗಿಲ್ಲ. ತುಂಬಾ ಒಳ್ಳೆಯ ಸ್ವಭಾವ, ಕುಂದಲತಳನ್ನು ಮಗುವಾಗಿದ್ದಾಗಲೇ ಎತ್ತಿ ಆಡಿಸಿದ ಸಾಕು ತಾಯಿಯಾದ ಅವರಿಗೆ ಪರಸ್ಪರ ತುಂಬಾ ಕಾಳಜಿಯೂ ಇದ್ದಿತ್ತು, ಯೋಗೀಶ್ವರನ ಕುರಿತು ಅವಳಿಗೆ ತುಂಬಾ ಗೌರವವೂ ಭಕ್ತಿಯೂ ಇತ್ತು, ಗೃಹವಾರ್ತೆಗಳನ್ನು ಎಲ್ಲವನ್ನು ಚೆನ್ನಾಗಿ ಮಾಡಿ ಮುಗಿಸಿ ಬಿಡುವಿದ್ದಾಗಲೆಲ್ಲ ಕುಂದಲತಳೊಡನೆ ಮಾತನಾಡುತ್ತಾ ಅವಳನ್ನು ಲಾಲನೆ ಮಾಡುತ್ತಾ ಕಾಲ ಕಳೆಯುವಳು.

ಯೋಗೀಶ್ವರನ ವನಭವನವು ಘೋರ ಕಾಂತಾರದಲ್ಲಿ ತುಂಬಾ ಏಕಾಂತ ಸ್ಥಳದಲ್ಲಿದೆಯಾದರೂ ಚುಟುಕಾಗಿ ಹೇಳುವುದಾದರೆ ಭದ್ರತೆ ರಕ್ಷಣೆಯಿರುವ ಭವನ, ಗಜ, ವ್ಯಾಘ್ರ ಮೊದಲಾದ ಕಾಡುಮೃಗಗಳ ಆಕ್ರಮಣವು ಆಗದಂತೆ ನಾಲ್ಕು ಭಾಗಗಳಲ್ಲೂ ಬೃಹತ್ತಾದ ಮರಗಳನ್ನು ತುಂಬಾ ಹತ್ತಿರವಾಗಿ ನೆಟ್ಟು ಬೆಳೆಯುವ ಬೇಲಿಯನ್ನು ಮಾಡಲಾಗಿದೆ. ಹಾಗಾಗಿ ಯೋಗೀಶ್ವರನು ಅತ್ಯಗತ್ಯವಾದ ಕೆಲವೊಂದು ಆಯುಧಗಳನ್ನು ಇಟ್ಟುಕೊಂಡಿದ್ದರಿಂದಲೂ ಆ ಬಗೆಯ ದುಷ್ಟ ಮೃಗಗಳ ಭೀತಿಯ ಪ್ರಮೇಯವಿಲ್ಲದೆ ಕಳೆಯಿತು. ಭವನದ ಸುತ್ತಲೂ ಒಂದು ದೊಡ್ಡ ತೋಪು, ಅಲ್ಲಿರುವ ಸಸ್ಯಾದಿಗಳಲ್ಲಿ ಕುಂದಲತಳ ಸ್ವಂತ ಕೈಯಿಂದ ನೀರನ್ನು ಆಸ್ವಾದಿಸಿದವು ತುಂಬಾ ಇವೆ. ಜಗಲಿಯ ಅಂಗಳದ ಸಮೀಪ ಕುಂದಲಗಳಿಗೆ ಪ್ರತ್ಯೇಕವಾಗಿ ಒಂದು ಹಿತ್ತಿಲು ಇದೆ. ಅದರಲ್ಲಿ ಮಂದಾರ, ಪನೀರ್, ಸೇವಂತಿಗೆ, ಮಲ್ಲಿಗೆಯೇ ಮೊದಲಾದ ಸುಗಂಧ ಪುಷ್ಪಗಳ ಗಿಡ ಬಳ್ಳಿಗಳನ್ನು, ನಿಂಬೆ, ದ್ರಾಕ್ಷಿ ಮಾದಳ ಹುಳಿ ಮೊದಲಾದ ವಿಶೇಷ ಫಲ ಬಿಡುವ ಮರಗಳನ್ನು, ಗಿಡಗಳನ್ನು ಕುಂದಲತಳೇ ಸ್ವಂತ ಕೈಯಲ್ಲಿ ನೆಟ್ಟು ನೆನೆಯಿಸಿದವಳು. ದಿನಂಪ್ರತಿ ಬೆಳಗಿನ ಹೊತ್ತಿಗೇ ಯೋಗೀಶ್ವರನ ಜೊತೆಗೆ ನಡೆಯಲು ಹೋಗದೆ ಇದ್ದ ಸಮಯಗಳಲ್ಲಿಯೂ ಕುಂದಲತ ಆ ಗಿಡಗಳನ್ನು ನೆನೆಯಿಸುವಳು.

**121.** ‘ಕೈಯಿಂದ’ – ಈ ಪದದಲ್ಲಿನ ಸಂಧಿ ಯಾವುದು ?

(1) ತೃತೀಯ (2) ಸಪ್ತಮಿ (3) ಚತುರ್ಥಿ (4) ಪಂಚಮಿ

**122.** ನಿಮಗೆ ಕೊಟ್ಟಿರುವ ಬರಹ ಭಾಗದಲ್ಲಿ ಬರುವ **'ಗೃಹವಾರ್ತೆ'** – ಪದದ ಅರ್ಥ :

(1) ಹೆಂಗಸರ ಸುದ್ದಿ
(2) ಮನೆಯಲ್ಲಿ ನಡೆಯುವ ವಿಚಾರ
(3) ಗೃಹ ಕೆಲಸ
(4) ಮನೆ ಸುದ್ದಿ

**123.** **'ನೆಟ್ಟು'** – ಈ ಪದದ ಧಾತು ಯಾವುದು ?

(1) ನೆಡ್
(2) ನೆ
(3) ನೆಡು
(4) ನೆಟ್

**124.** **'ಸಫಲ'** – ಈ ಪದದ ವಿರುದ್ಧ ಪದ :

(1) ನಫಲ
(2) ಅಫಲ
(3) ಫಲ
(4) ವಿಫಲ

**125.** **'ಕಾಂತಾರ'** – ಈ ಪದದ ಅರ್ಥ :

(1) ಪ್ರಿಯಕರ
(2) ಅಡವಿ
(3) ತೋಟ
(4) ಪ್ರೇಮಿ

**126.** ವಾರ್ಧಕ್ಯ – ಈ ಪದವು ಯಾವ ಗುಂಪಿಗೆ ಸೇರುತ್ತದೆ ?

(1) ನಾಮಪದ
(2) ವಿಶೇಷಣ
(3) ಕ್ರಿಯಾವಾಚಕ
(4) ಸರ್ವನಾಮ

**127.** ಕುಂದಲತಳ ಬೆಳವಣಿಗೆಗೆ ಕಾರಣವಾದವರು :

(1) ಯೋಗೀಶ್ವರ
(2) ಯೋಗೀಶ್ವರ, ಪಾರ್ವತಿ
(3) ಯೋಗೀಶ್ವರ, ಪಾರ್ವತಿ ಮತ್ತು ಪ್ರಕೃತಿ
(4) ಕುಂದಲತಳ ತಂದೆ ಮತ್ತು ಪಾರ್ವತಿ

**128.** ಶೈಶವ – ಈ ಪದದ ಅರ್ಥ :

(1) ಹುಟ್ಟಿದ ಕೂಸು ಅವಸ್ಥೆ
(2) ತಾರುಣ್ಯ
(3) ಬಾಲ್ಯ
(4) ಪ್ರೌಢ

www.careerindia.com

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129 - 135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

"ಕರ್ನಾಟಕ ಗತವೈಭವ" ಒಂದು ಇತಿಹಾಸ ಗ್ರಂಥ. ಈ ಪ್ರಕಾರವನ್ನು ಸಮರ್ಥಿಸಿಕೊಳ್ಳುತ್ತ ಆಲೂರರು ಇದೇ ಪ್ರಸ್ತಾವನೆಯನ್ನು ಆರಂಭಿಸುವುದು ಹೀಗೆ : "ವರ್ತಮಾನ ಕಾಲವೆಂಬ ವೃಕ್ಷಕ್ಕೆ ಭೂತಕಾಲವೆ ಬೀಜ, ಭವಿಷ್ಯತ್ ಕಾಲವೇ ಫಲ. ಭವಿಷ್ಯತ್ಕಾಲದ ರಾಷ್ಟ್ರೀಯ ಫಲವನ್ನು ಪಡೆಯಲಪೇಕ್ಷಿಸುವವರು ಭೂತಕಾಲದ ಬೀಜ ಸಾಮರ್ಥ್ಯವನ್ನು ಅರಿತುಕೊಳ್ಳುವುದು ಅವಶ್ಯವು. ಈ ದೃಷ್ಟಿಯಿಂದ ನೋಡಲು ರಾಷ್ಟ್ರೀಯ ಕಾರ್ಯಕ್ಕೆ ಇತಿಹಾಸವು ಹೇಗೆ ಸಾಧನವಾಗಬಹುದೆಂಬುವದು ಮನವರಿಕೆಯಾಗುವದು. ಭರತಭೂಮಿಯ ಮಿಕ್ಕ ಜನಾಂಗಗಳು ತಮ್ಮ ತಮ್ಮ ಇತಿಹಾಸವನ್ನು ಹುರುಪಿನಿಂದ ಅಭ್ಯಾಸ ಮಾಡುತ್ತಿರಲು ನಮ್ಮ ಕರ್ನಾಟಕವು ಇನ್ನೂ ಕುಂಭಕರ್ಣ ನಿದ್ರೆಯಲ್ಲೇ ಮಲಗಿದೆ. ಆದ್ದರಿಂದ ಕರ್ನಾಟಕದ 'ಮಹಾತ್ಮ್ಯ'ವನ್ನು ಹೊಗಳಿ, ಇನ್ನೂ ಎಚ್ಚರಾಗದಿದ್ದ ತರುಣರನ್ನು ಎಚ್ಚರಿಸಬೇಕೆಂದು ಈ ಪ್ರಬಂಧವನ್ನು ಕೈಗೊಂಡಿದ್ದೇನೆ." ಈ ಮಾತಿನಲ್ಲಿ ಆಲೂರರು ವೈಚಾರಿಕರೂ ಆಗಿದ್ದಾರೆ, ರಾಜಕೀಯ ವಾಗ್ಮಿಯೂ ಆಗಿ ತೋರಿಸಿಕೊಳ್ಳುತ್ತಾರೆ. ಇತಿಹಾಸದ ಜ್ಞಾನ ಇಂದು ನಾಳಿನ ರಾಷ್ಟ್ರೀಯ ಕಾರ್ಯಕ್ಕೆ ಅಗತ್ಯ ಎನ್ನುವಲ್ಲಿ ಅವರು ವಿಚಾರವಾದಿಯಾದರೆ, ಕುಂಭಕರ್ಣನ ಉಪಮೆಯವನ್ನು ಕೊಡುವಲ್ಲಿ ವಾಗ್ಮಿಯಾಗುತ್ತಾರೆ, ಎಂದರೆ ಮನಸ್ಸಿಗೆ ನಾಟುವ ಏರುದನಿಯ ಶೈಲಿ ಬಳಸುತ್ತಾರೆ. ಇಡೀ ಪುಸ್ತಕದ ವಿಧಾನವೇ ಈ ರೀತಿಯದು. ಇದು ಭಾರತದ ಸ್ವಾತಂತ್ರ್ಯ ಸಂಗ್ರಾಮದಿಂದ ಸ್ಫೂರ್ತವಾದದ್ದು, ಹಾಗೂ ಇದುವೇ ಕನ್ನಡದ ಅರುಣೋದಯ ಮತ್ತು ನವೋದಯ ಕಾಲದ ಮನೋಭೂಮಿಕೆಯನ್ನು ರೂಪಿಸಿದ್ದೂ ಕೂಡ ಅನಿಸುತ್ತದೆ.

"ಕರ್ನಾಟಕ ಗತವೈಭವ"ದ ಕುರಿತು ಮುಂದುವರಿಯುತ್ತ ಲೇಖಕರು "ಇದು ಕೇವಲ ಇತಿಹಾಸವಲ್ಲ; ಆದರೆ ಕಟ್ಟುಕತೆಯೂ ಅಲ್ಲ; ಕರ್ನಾಟಕದ ಇತಿಹಾಸದೊಳಗಿನ ಚಿತ್ತಾಕರ್ಷಕವಾದ ಕೆಲವು ಸಂಗತಿಗಳನ್ನು ಅನೇಕ ಪುಸ್ತಕಗಳಿಂದ ಆರಿಸಿ, ನಮಗೆ ತೋರಿದ ಕೆಲವು ವಿಧಾನಗಳನ್ನು ಅವುಗಳಲ್ಲಿ ಬೆರೆಸಿ, ಆ ಮಿಶ್ರಣವನ್ನು ಕಾಸಿ ಕರ್ನಾಟಕದ ಅಭಿಮಾನವೆಂಬ ಎರಕದಲ್ಲಿ ಕೈಲಾದಷ್ಟು ಮಟ್ಟಿಗೆ ಹೊಯ್ದು ಈ ಪ್ರಬಂಧವನ್ನು ರಚಿಸಲಾಗಿದೆ. ಆದುದರಿಂದ ನಮ್ಮ ಪೂರ್ವಜರ ಗುಣಾನುವಾದವೂ ಈ ಪ್ರಬಂಧದಲ್ಲಿ ಕಂಡುಬರುವುದು. ನಾವು ಹೊಗಳುಭಟ್ಟರಂತೆ ನಮ್ಮ ಪೂರ್ವಜರನ್ನು ಹೀಗೆ ಹೊಗಳಿರುವ ಮಾತ್ರದಿಂದ, ಅವರು ಲೋಕವಿಲಕ್ಷಣರೂ ಸರ್ವಗುಣ ಪೂರ್ಣರೂ ಆಗಿರುವರೆಂದು ನಮ್ಮ ಅಭಿಪ್ರಾಯವಿರುವುದಾಗಿ ಯಾರೂ ಊಹಿಸಕೂಡದು" ಎಂಬ ಎಚ್ಚರಿಕೆಯನ್ನೂ ನೀಡುತ್ತಾರೆ. ಈ ಕೃತಿ ಒಂದು ತರದ 'ಸರಿಪಡಿಸುವಿಕೆ'ಯಾಗಿದೆ: ಯಾಕೆಂದರೆ ತೆಗಳಿಕೆಗಳು ಸಾಕಷ್ಟು ಬಂದಿವೆ; ಕನ್ನಡಿಗರಲ್ಲಿ ತಾವು ಹೇಡಿಗಳು ಎಂಬ ಭಾವನೆಯೂ ಮೂಡಿದೆ. ಇದನ್ನು ಸರಿಪಡಿಸಲೆಂದೇ ತಾವು ಈ ಕೃತಿ ಬರೆದಿರುವುದಾಗಿ ಆಲೂರರು ಹೇಳಿಕೊಳ್ಳುತ್ತಾರೆ; ಯಾಕೆಂದರೆ ಕೀಳರಿಮೆ ಯಾವತ್ತೂ ಕ್ಲೈಬ್ಯದ ಸ್ವಯಂ ಪ್ರೇರಣೆಗೆ ಕಾರಣವಾಗುತ್ತದೆ. ಹೀಗೆ ಆಲೂರರ ಈ ಕೃತಿಯನ್ನು ನಾವು ಆ ಕಾಲದ ಅಗತ್ಯಗಳ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

**129.** 'ವಾಗ್ಮಿ' ಎಂದರೆ :

(1) ಉತ್ಕೃಷ್ಟ ವಿಚಾರವಾದಿ
(2) ಉತ್ತಮ ಮಾತುಗಾರ
(3) ವಿಶ್ಲೇಷಕ
(4) ಒಳ್ಳೆಯ ಮನುಷ್ಯ

**130.** ಕರ್ನಾಟಕ ಗತವೈಭವ ಕೃತಿ ರಚನೆಯ ಉದ್ದೇಶ :

(1) ಜನತೆಯ ಬಗೆಗಿನ ಕಾಳಜಿ
(2) ಕನ್ನಡಿಗರನ್ನು ತಮ್ಮ ಪರಂಪರೆ ಅರಿಯುವಂತೆ ಎಚ್ಚರಿಸುವುದು
(3) ಕನ್ನಡ ಜನತೆಯ ಬಗೆಗಿನ ಪ್ರೀತಿ
(4) ಮರಾಠಿಗರ ಪ್ರಾಬಲ್ಯ ಎದುರಿಸಲು

**131.** ಭೂತಕಾಲದ ಕಾಲಸೂಚಕ ಪ್ರತ್ಯಯ :

(1) ವ
(2) ಉತ್ತ
(3) ತ್ತ
(4) ಸ

www.careerindia.com

CAREERINDIA

**132.** ಕರ್ನಾಟಕದ ಗತವೈಭವವು ತಿಳಿಸುವುದು :

(1) ಕರ್ನಾಟಕದ ಚರಿತ್ರೆಯನ್ನು

(2) ಕರ್ನಾಟಕದ ಅಳಿದು ಹೋದ ಸಾಮ್ರಾಜ್ಯವನ್ನು

(3) ಕರ್ನಾಟಕ ನೆಲವನ್ನು

(4) ಕರ್ನಾಟಕದ ಅಭಿಮಾನದ ಬಗೆಗಿನ ಎಚ್ಚರವನ್ನು

**133.** 'ಚಿತ್ತಾಕರ್ಷಕ' ಪದವನ್ನು ಹೀಗೆ ಬಿಡಿಸಬಹುದು :

(1) ಚಿತ್ + ಆಕರ್ಷಕ

(2) ಚಿತ್ತಾ + ಕರ್ಷಣ

(3) ಚಿತ್ತು + ಆಕರ್ಷಕ

(4) ಚಿತ್ತಾ + ಆಕರ್ಷಕ

**134.** 'ದೃಷ್ಟಿ' ಪದದ ತದ್ಭವ :

(1) ಸೃಷ್ಟಿ

(2) ದುರುಷ್ಟಿ

(3) ದಿಷ್ಟಿ

(4) ದಿಟ್ಟಿ

**135.** ಈ ಲೇಖನದ 'ಕುಂಭಕರ್ಣ' ನಿದ್ದೆ ಅಂದರೆ :

(1) ಮೈ ಮರೆವು (2) ದೀರ್ಘಕಾಲ (3) ಮಡಕೆಯಂತೆ (4) ರಾವಣನ ತಮ್ಮ

**136.** ಹಲವಾರು ಸಂಖ್ಯೆಯ ಏಕಕಾಲಿಕ (Synchronous) ಮತ್ತು ಭಿನ್ನಕಾಲಿಕ (Asynchronous) ಆನ್‌ಲೈನ್ ಬೋಧನಾ ಅವಕಾಶಗಳನ್ನು ಕಲ್ಪಿಸುವ ಸಾಧನ ಯಾವುದು ?

(1) ಪಠ್ಯಪುಸ್ತಕ

(2) ರೈಲು ಟಿಕೆಟ್

(3) ದೂರದರ್ಶನ

(4) ಪ್ಯಾಡ್ಲೆಟ್ (padlet)

**137.** ಈ ಕೆಳಕಂಡ ಸಾಧನವು ರಚನಾತ್ಮಕ ಮೌಲ್ಯಮಾಪನಕ್ಕೆ ಸೂಕ್ತವಲ್ಲ ?

(1) ಕಾರ್ಯನಿಯೋಜನೆ (assignment)

(2) ಕಾಗದ–ಪೆನ್ಸಿಲ್ ಪರೀಕ್ಷೆ (paper pencil test)

(3) ಕಾರ್ಯಯೋಜನೆ (project)

(4) ತರಗತಿಯಲ್ಲಿ ಮಂಡಿಸುವುದು (class presentation)

**138.** ಭಾಷೆಯನ್ನು ಕಲಿಸಲು ದೈನಂದಿನ ವಸ್ತುಗಳನ್ನು ಬಳಸುವುದನ್ನು ಹೀಗೆ ಕರೆಯುತ್ತಾರೆ :

(1) ದೈನಂದಿನ ವಸ್ತುಗಳ ಬಳಕೆ

(2) ಭಾಷಾ ಆಟಗಳು

(3) ಬೋಧನಾ ಪರಿಕರ

(4) ಪಠ್ಯ

www.careerindia.com

CAREERINDIA

**139.** ಶೈಕ್ಷಣಿಕ ನೀತಿಯಲ್ಲಿ (ತ್ರಿಭಾಷಾ ಸೂತ್ರ) ಭಾರತದ ಭಾಷೆಯು ಈ ಮುಂದಿನ ಸಂಗತಿಗಳಿಗೆ ಉತ್ತೇಜನ ನೀಡಲು ಪ್ರಯತ್ನಿಸುತ್ತದೆ.

(1) ಬಹುಭಾಷಾ ಶಿಕ್ಷಣ

(2) ಏಕಭಾಷಾ ಶಿಕ್ಷಣ

(3) ಹಿಂದಿ ಭಾಷೆಗೆ ಆದ್ಯತೆ ನೀಡುವುದರೊಂದಿಗೆ ದ್ವಿಭಾಷಾ ಶಿಕ್ಷಣ

(4) ಮಾತೃಭಾಷೆ ಆಧಾರಿತ ಬಹುಭಾಷಾ ಶಿಕ್ಷಣ

**140.** ಟಾಪ್ ಅಪ್ (Top up) ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ ಸರಿಯಲ್ಲ ?

(1) ಕೇಳುಗರು ತಮ್ಮ ಹಿನ್ನೆಲೆ ತಿಳಿವಳಿಕೆಯನ್ನು ಆಧರಿಸಿರುತ್ತಾರೆ

(2) ಕೇಳುಗರು ಉದ್ದೇಶಿತ ಅರ್ಥದ ಬಗ್ಗೆ (intended meaning) ಊಹೆ ಮಾಡಬೇಕು

(3) ಕೇಳುಗರು ವಿಶ್ವಜ್ಞಾನವನ್ನು ಉಪಯೋಗಿಸಿಕೊಳ್ಳಬೇಕು

(4) ಕೇಳುಗರು ಪ್ರತಿಯೊಂದು ಪದವನ್ನು ಅರ್ಥಮಾಡಿಕೊಳ್ಳುವುದು ಅಗತ್ಯ

**141.** ಅಂತಾರಾಷ್ಟ್ರೀಯ ಮಾತೃಭಾಷಾ ದಿನವನ್ನಾಗಿ ಯಾವಾಗ ಆಚರಿಸಲಾಗುತ್ತದೆ ?

(1) 1ನೇ ಜನವರಿ (2) 14ನೇ ಫೆಬ್ರವರಿ

(3) 21ನೇ ಫೆಬ್ರವರಿ (4) 13ನೇ ಏಪ್ರಿಲ್

**142.** ನಿಮ್ಮ ಸ್ನೇಹಿತನಾಗಿರುವ ಸಹೋದ್ಯೋಗಿಗೆ ನೀವು ಇ–ಮೇಲ್ ಬರೆದಿದ್ದರೆ, ಆ ಇ–ಮೇಲ್‌ನ ಪ್ರಕಾರವನ್ನು ಗುರುತಿಸಿ.

(1) ಅನೌಪಚಾರಿಕ (Informal)

(2) ಔಪಚಾರಿಕ (Formal)

(3) ವ್ಯವಹಾರಿಕ (Business)

(4) ಪತ್ರವ್ಯವಹಾರ (Correspondence)

**143.** ವಿದ್ಯಾರ್ಥಿಯ ಕಲಿಕೆ ಮತ್ತು ಗ್ರಹಿಕೆಯನ್ನು ಸ್ಪಷ್ಟಪಡಿಸಿಕೊಳ್ಳಲು ಬೋಧನೆ–ಕಲಿಕೆ ಪ್ರಕ್ರಿಯೆಯುದ್ದಕ್ಕೂ ಮಾಡಲಾದ ಮೌಲ್ಯಮಾಪನವನ್ನು ಈ ಮುಂದಿನಂತೆ ಕರೆಯುತ್ತಾರೆ ?

(1) ಕಲಿಕೆಗೆ ಸಂಬಂಧಿಸಿದ ಮೌಲ್ಯಮಾಪನ (Assessment for learning)

(2) ಕಲಿಕೆಯ ಮೌಲ್ಯಮಾಪನ (Assessment of learning)

(3) ಕಲಿಕೆಯ ವಿಷಯದಲ್ಲಿ ಮೌಲ್ಯಮಾಪನ (Assessment in learning)

(4) ಕಲಿಕೆಯಾಗಿ ಮೌಲ್ಯಮಾಪನ (Assessment as learning)

**144.** ದ್ವಿತೀಯ ಭಾಷಾ ತರಗತಿಯಲ್ಲಿ, ಶಿಕ್ಷಕನು 'ಆರೋಗ್ಯವೇ ಭಾಗ್ಯ' ಎಂಬ ವಿಷಯದ ಬಗ್ಗೆ ಆಡಿಯೋ ಕೇಳಿಸಿದನು. ನಂತರ ಮಾಹಿತಿಯನ್ನೊಳಗೊಂಡ ಪತ್ರಗಳನ್ನು (handouts) ನೀಡಿ ನೀಡಿದ ಆಯ್ಕೆಗಳಿಂದ ಸರಿಯಾದ ಉತ್ತರಕ್ಕೆ ಗುರುತು ಮಾಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ರೀತಿಯ ಕಲಿಕೆಯ ಉದ್ದೇಶ ಕಲಿಯುವವರನ್ನು ಈ ಕೆಳಕಂಡ ಅಂಶಗಳನ್ನು ಕಲಿಯಲು ಸಾಧ್ಯಮಾಡಿಕೊಡುವುದಾಗಿದೆ.

(1) ಆರೋಗ್ಯದ ಬಗ್ಗೆ ಪಾಠ ಕೇಳುವುದು

(2) ಕಲಿಯುವವರನ್ನು ಚಟುವಟಿಕೆಯೊಂದಿಗೆ ತೊಡಗಿಸಿಸುವುದು

(3) ಆಲೋಚನೆಗಳನ್ನು ವಿಶ್ಲೇಷಿಸಲು ಕೇಲುವುದು

(4) ಆರೋಗ್ಯ ಮತ್ತು ಭಾಗ್ಯ ಕುರಿತ ಪಾಠವನ್ನು ಕಂಠಪಾಠ ಮಾಡುವುದು

www.careerindia.com

**145.** ಭಾಷಾ ಕಲಿಕೆಯಲ್ಲಿನ ತಪ್ಪುಗಳ ಬಗ್ಗೆ ಕೆಳಕಂಡ ಹೇಳಿಕೆಗಳಲ್ಲಿ ಯಾವುದು ಸರಿಯಲ್ಲ ?

(1) ತಪ್ಪುಗಳು ಭಾಷಾ ಕಲಿಕಾ ಪ್ರಕ್ರಿಯೆಗೆ ಅಡ್ಡಿಯುಂಟುಮಾಡುತ್ತವೆ.

(2) ತಪ್ಪುಗಳನ್ನು ಮಾಡುವುದು ಯಾವಾಗಲೂ ಕೆಟ್ಟದ್ದಲ್ಲ. ಅದು ಕಲಿಯಲು ಸಹಾಯಕವಾಗುತ್ತದೆ.

(3) ತಪ್ಪುಗಳು ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ಮಹತ್ವಪೂರ್ಣವಾದ ಅಂಶಗಳಾಗಿವೆ.

(4) ತಪ್ಪುಗಳು ದ್ವಿತೀಯ ಭಾಷಾರ್ಜನೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ.

**146.** ಭಾಷಾ ಶಿಕ್ಷಣದಲ್ಲಿ ಸೃಜನಾತ್ಮಕತೆ ಎಂದರೆ :

(1) ಬೇರೆ ಬೇರೆ ವ್ಯಾಖ್ಯಾನಗಳು ಮತ್ತು ಉತ್ತರಗಳಿಗೆ ಅವಕಾಶ ಕಲ್ಪಿಸುವ ಓಪನ್–ಎಂಡೆಡ್(open-ended) ತರಗತಿಗಳು.

(2) ಯಾವುದೇ ಒಂದನ್ನು ಅರ್ಥಮಾಡಿಕೊಳ್ಳಲು ವಿವಿಧ ವಿಷಯಗಳಿಂದ ತೆಗೆದ ಅಂಶಗಳನ್ನು ವಿಲೀನ ಮಾಡುವುದು.

(3) ಹೊಸ ಹೊಸ ಬೋಧನಾ ವಿಧಾನಗಳ ಮೂಲಕ ತರಗತಿಯಲ್ಲಿ ಚಟುವಟಿಕೆಗಳನ್ನು ನಡೆಸುವುದು.

(4) ಸಂವಹನಾತ್ಮಕ ಭಾಷಾ ಬೋಧನೆ ಮೂಲಕ ತರಗತಿಯಲ್ಲಿ ಪಠ್ಯ ಪರಿಕರಗಳನ್ನು ಬಳಸುವುದು.

**147.** ಕಲಿಯುವವರನ್ನು ಭಾಷೆಗೆ ಒಡ್ಡಬೇಕು ಮತ್ತು ತಪ್ಪುಗಳು ಕಲಿಕೆ ಪ್ರಕ್ರಿಯೆ ನಡೆಯುತ್ತಿದೆ ಎಂಬುದಕ್ಕೆ ಸಾಕ್ಷಿ ಎಂಬ ಮಾತನ್ನು ಈ ಕೆಳಕಂಡ ಯಾವ ಸಿದ್ಧಾಂತ ಸಮರ್ಥಿಸುತ್ತದೆ ?

(1) ವರ್ತನಾವಾದಿಗಳು (Behaviourists)

(2) ಜ್ಞಾನಗ್ರಹಣವಾದಿಗಳು (Cognitivist)

(3) ಮಾನವತಾವಾದಿಗಳು (Humanist)

(4) ಮನೋವಿಶ್ಲೇಷಣಾವಾದಿಗಳು (Psychoanalyst)

**148.** ಈ ಮುಂದಿನ ಹೇಳಿಕೆಗಳಲ್ಲಿ ಯಾವುದು ಸರಿ ?

(a) ಡಿಸ್‌ಲೆಕ್ಸಿಯಾ (Dyslexia) ಓದುವ ಅಸ್ವಸ್ಥತೆ

(b) ಡಿಸ್‌ಗ್ರಾಫಿಯಾ (Dysgraphia) ಬರವಣಿಗೆಯ ಅಸ್ವಸ್ಥತೆ

(c) ಡಿಸ್‌ಗ್ರಾಫಿಯಾ (Dysgraphia) ಓದುವ ಅಸ್ವಸ್ಥತೆ

(d) ಡಿಸ್‌ಲೆಕ್ಸಿಯಾ (Dyslexia) ಬರೆಯುವ ಅವ್ಯವಸ್ಥೆ

(1) (a) ಮಾತ್ರ ಸರಿ
(2) ಕೇವಲ (b) ಮತ್ತು (d) ಮಾತ್ರ ಸರಿ
(3) (a) ಮತ್ತು (b) ಎರಡೂ ಸರಿ
(4) (c) ಮತ್ತು (d) ಎರಡೂ ಸರಿ

**149.** ಸರ್ಕಾರಿ ಶಾಲಾ ಶಿಕ್ಷಕಿಯಾದ ರೀಟಾ VIIನೇ ತರಗತಿಯ ವಿದಾರ್ಥಿಗಳಿಗೆ ಇಂಗ್ಲಿಷ್ ಕಲಿಸಲು ವೀಕ್ಷಣ ಸಾಧನಗಳನ್ನು ಮತ್ತು ಭಾಷೆಯ ಆಟಗಳನ್ನು ಬಳಸುತ್ತಾಳೆ.

ರೀಟಾ ಶಿಕ್ಷಣದ ಯಾವ ತತ್ವವನ್ನು ಅನ್ವಯಿಸುತಿದ್ದಾಳೆ ?

(1) ಸ್ವಾಭಾವಿಕ ಪ್ರಕ್ರಿಯೆಯ ತತ್ವ

(2) ಅಭ್ಯಾಸ ಮತ್ತು ಹವ್ಯಾಸ ರೂಢಿಸುವ ತತ್ವ

(3) ಉತ್ತೇಜನ ಮತ್ತು ಆಸಕ್ತಿ ತತ್ವ

(4) ಜೀವನಕ್ಕೆ ಪರಸ್ಪರ ಸಂಬಂಧಿಸಿರುವ ತತ್ವ

**150.** ಪ್ರಾಣಿಗಳು ಮುಖ್ಯ ಪಾತ್ರವಾಗಿರುವ ಮತ್ತು ಅದರಲ್ಲಿ ನೀತಿಯನ್ನು ತೆಗೆದು ಬೋಧಿಸುವ ಕಿರುಕತೆಯನ್ನು ಏನೆನ್ನುತ್ತಾರೆ ?

(1) ಕಾಲ್ಪನಿಕ ಕತೆ
(2) ಪೌರಾಣಿಕ ಕತೆ
(3) ವೈಜ್ಞಾನಿಕ ಕಲ್ಪಿತ ಕತೆ
(4) ಪ್ರವಾಸ ಕತೆ

- o O o -

www.careerindia.com

SPACE FOR ROUGH WORK

www.careerindia.com

ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***

www.careerindia.com